



# ಬಾಸ್ಟನ್ನಿನ ಮೇಲ್ ಮಂಜು..!

**ಮರಳುಗಾಡಿನ ಕೊಲ್ಲಿ ದೇಶಗಳಲ್ಲಿ ಅಕಾಲಿಕ ಮಳೆ; ಅಮೆರಿಕದ ಬಾಸ್ಟನ್ನಿನಲ್ಲಿ ವಿಪರೀತ ಮಂಜು. ಈ ಸಲ ಪ್ರಕೃತಿಯ ಉಲ್ಟಾಪಲ್ಟಾ ಆಟವಾಡುತ್ತಿರುವಂತಿದೆ!**

**★ ಮಂಜುಳಾರಾಜ್**

ಶಿವ ಶಿವಾಂತ ಶಿವರಾತ್ರಿ ಆಚರಣೆ ಮಾಡಿ ಮುಗಿಸುವಷ್ಟರಲ್ಲೇ ನಮ್ಮ ದೇಶದಲ್ಲಿ ಆಗಲೇ ಸೂರ್ಯ ಚುರುಕು ಮುಟ್ಟಿಸುತ್ತಿದ್ದಾನೆ. ರಾಜ್ಯದಲ್ಲಿ ಈ ಸಲ ಬರಗಾಲ ಅದಾಗಲೇ ಕಾಲುಚಾಚಿದೆ. ಜೂನ್‌ನಲ್ಲಿ ಮಳೆ ಬರುತ್ತದೋ ಇಲ್ಲವೋ ಗೊತ್ತಿಲ್ಲ, ಅದಕ್ಕೂ ಮುಂಚೆ ಕುಡಿಯುವ ನೀರಿಗೂ ಹಾಹಾಕಾರ ಏಳುವುದು ಖಚಿತ.

ಕೊಲ್ಲಿ ದೇಶಗಳಲ್ಲಿ ಪರಿಸ್ಥಿತಿ ಬೇರೆಯೇ ಇದೆ. ಮರುಭೂಮಿಯ ಆ ರಾಜ್ಯಗಳಲ್ಲಿ ಫೆಬ್ರವರಿ ತಿಂಗಳಲ್ಲಿ ಧಾರಾಕಾರ ಮಳೆ ಸುರಿಯುತ್ತಿದೆ. ವಿಪರೀತ ಚಳಿ ಮತ್ತು ಥಂಡಿಯಿಂದಾಗಿ ಜನ ಮನೆಯಿಂದ ಹೊರಗೆ ಬರುತ್ತಿಲ್ಲ. ಅದೇ ಟರ್ಕಿಯಲ್ಲಿ ಅಲ್ಲಿನ ತೋಟಗಾರಿಕಾ ಬೆಳೆಗಳಿಗೆ ಬೇಕಾದ ತೀವ್ರ ಚಳಿಯೇ ಇಲ್ಲದೆ, ರೈತರು ಆತಂಕಕ್ಕೆ ಒಳಗಾಗಿದ್ದಾರೆ.

ಅಮೆರಿಕಾದ ಬಾಸ್ಟನ್ನಿನಲ್ಲಿ ಸೂರ್ಯನ ಸುಳಿವೇ ಇಲ್ಲ! ಮಂಜಿನ ಮಳೆಯ ಮಧ್ಯೆ ಜನ ಮನೆಯ ಮೂಲೆ ಹಿಡಿದಿದ್ದಾರೆ. ಯಾವತ್ತೂ ಇಲ್ಲದಷ್ಟು ಮಂಜು ಸುರಿದು ಜನ ಇನ್ನಿಲ್ಲದ ಫಜೀತಿ ಪಡುತ್ತಿದ್ದಾರೆ.

ಪ್ರತಿ ಶನಿವಾರ ಬಾಸ್ಟನ್ನಿನಲ್ಲಿರುವ ಮಗನ ಹತ್ತಿರ, ವಿದೇಶದಲ್ಲಿರುವ ಮಕ್ಕಳೊಡನೆ ಎಲ್ಲ ತಂದೆ ತಾಯಿಯರೂ ಮಾಡುವಂತೆ, ಮುಖ ನೋಡಿಕೊಂಡು ಮಾತನಾಡುವುದು ರೂಢಿ. ಈ ವಾರ ಅವರ್ಯಾರೂ ಸ್ಕೈಪ್ ಗೆ ಸಿಗಲಿಲ್ಲ. ಹಾಗಾಗಿ ಫೋನ್ ಮಾಡಿದರೆ 'ಅಮ್ಮಾ , ನಾಳೆ ನಮ್ಮ ಊರಿಗೆ ಮಂಜಿನ ಮಳೆ, ಬಿರುಗಾಳಿ ಬರುತ್ತದಂತೆ. ಅದಕ್ಕೆ ಮನೆಗೆ ಸಾಮಾನು ತರಲು ಹೊರ ಬಂದಿದ್ದೇನೆ, ನಾಳೆ ಹೊರಗೆ ಹೋಗಲು ಆಗುವುದಿಲ್ಲ' ಎಂದ. ನನಗೋ ಆತಂಕ. ಮತ್ತೆರಡು ದಿನ ಬಿಟ್ಟು ಮಾತನಾಡಿಸಿದಾಗ ಹೇಳಿದ್ದು – 'ಅಮ್ಮಾ ಇಲ್ಲಿ ಎಲ್ಲಿ ನೋಡಿದರೂ ಮಂಜೋ ಮಂಜು! ಈ ಶತಮಾನದಲ್ಲಿ ಇಷ್ಟೊಂದು ಮಂಜು ಯಾವಾಗಲೂ ಬಿದ್ದಿಲ್ಲವಂತೆ. ಇದು ಮೂರನೆಯ ಬಾರಿಯಂತೆ, 1993ರಲ್ಲೂ ಒಮ್ಮೆ ಹೀಗೆ ಬಂದಿತ್ತಂತೆ!'



